ಶ್ರೀ ಆರ್. ಕೆಂಚಪ್ಪ. ಪ್ರಾತಿನಿಧ್ಯ ಕೊಡಬೇಕಾದರೆ ಇರಬೇಕಾದ ಅರ್ಹತೆಗಳೇನು ?

†ಶ್ರೀ ಎಸ್. ನಿಜಲಿಂಗಪ್ಪ.—ಯಾವ ಯಾವ ಕೆಲಸಕ್ಕೆ ಯಾರ್ಯಾರು ಯೋಗ್ಯರೋ, ಅವರೇ ಅರ್ಹರು.

ಶ್ರೀ ಆರ್. ಕೆಂಚಪ್ಪ.—ನೇಮಕ ಮಾಡುವುದಕ್ಕೆ ಯಾವ ಅಡ್ಡಿ ಆತಂಕಗಳೂ ಇರಕೂಡದು ಎಂದು ಹೇಳಿದ್ದೀರಿ. ಆತಂಕಗಳು ಎಂದರೆ ಏನು ಎಂದು ವಿವರಣೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿದೆ ಆತಂಕ ? ಯೋಗ್ಯರು ಇದ್ದರೆ ನೇಮಕ ಮಾಡುತ್ತೇವೆ. ಯಾರೂ ಇಲ್ಲದೆ ಹೋದರೆ ಆತಂಕವಾಗುತ್ತದೆ.

ಶ್ರೀ ಆರ್. ಕೆಂಚಪ್ಪ.—ಯೋಗ್ಯರೆಂದು ಪರಿಗಣಿಸಬೇಕಾದರೆ ಅವರಿಗೆ ನಿರ್ದಿಷ್ಟ ಅರ್ಹತೆಗಳೇನಿರಬೇಕು ?

ಶ್ರೀ ಎಸ್. ನಿಜಲಿಂಗಪ್ಪ.—ಬುದ್ಧಿವಂತರಾಗಿರಬೇಕು, ವಿದ್ಯಾವಂತರಾಗಿರಬೇಕು, ವಿಚಾರಗಳನ್ನು ತಿಳಿದುಕೊಂಡಿರಬೇಕು, ಸಾಕಷ್ಟು ಪ್ರತಿಭಾವಂತರೂ ಆಗಿರಬೇಕು.

Improvements to Bharamasagara Major tank in Chitradurga Taluk.

*Q. —555. Sri M. N. KRISHNASINGH (Jagalur).—

Will the Government be pleased to state.—

(*a*) whether estimates have been prepared for the improvements of Bharamasagara Major Tank in Chitradurga Taluk ;

(*b*) if so, the reasons as to why the work has not been carried out as per the estimate made ;

(*c*) whether they will take steps to commence the works at least now ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Does not arise in view of reply to clause (*a*)

(*c*) Do do

ಶ್ರೀ ಎಂ. ಎನ್. ಕೃಷ್ಣಸಿಂಗ್.—ಅಂದಾಜು ತಯಾರಿಸಿಲ್ಲ ಎಂದು ಹೇಳಿದ್ದೀರಿ. ಮೊನ್ನೆ ಭಾರಿ ಮಳೆ ಬಂದು, ಏರೀ ಮೇರೆ ನೀರು ವಿಪರೀತವಾಗಿ ಹರಿದು ಸ್ಥಳದ ಅಧಿಕಾರಿಗಳು ಧಾವಿಸಿ, ಹಿಂದಿರುವ ಹಳ್ಳಿಗಳಿಗೆ ನೀರು ನುಗ್ಗದಂತೆ ನೋಡಿಕೊಂಡದ್ದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—Detailed estimate ತಯಾರಾಗಿಲ್ಲ. ಆದರೆ ಏರಿ raise ಮಾಡಬೇಕೆಂದು instructions ಕೊಟ್ಟಿದೆ. ತೂಬು ಜಖಂ ಆಗಿರುವುದನ್ನು ಸರಿ ಮಾಡಲು 1930 ರೂಪಾಯಿ ಅಂದಾಜು ಮಾಡಿದೆ. Ageney ಸಹ fix ಮಾಡುವುದರಲ್ಲಿ ಇದೆ. ಕೆಲಸ ತೆಗೆದುಕೊಳ್ಳುವಂತೆ ಮಾಡುತ್ತೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.— ಕೆಲಸ ತೆಗೆದುಕೊಳ್ಳಲು ಯಾವ ಕ್ರಮ ತೆಗೆದುಕೊಂಡಿದ್ದೀರಾ

ಶ್ರೀ ಆಲೂರು ಹನುಮಂತಪ್ಪ.— Agency fix ಮಾಡುವ stageನಲ್ಲಿ ಇದೆ.

ಶ್ರೀ ವಿ. ಮುನಿಯಪ್ಪ.—ಮುಂದಿನ ಮಳೆ ಬಂದು ಆ ಕೆರೆ ಅಪಾಯಕ್ಕೆ ಈಡಾಗುವರೊಳಗೆ ಈ ಬೇಸಿಗೆಯಲ್ಲಿಯೇ ಕಾಂಗಾರಿ ಪೂರೈಸುತ್ತಿಲ್ಲ.

ಶ್ರೀ ಆಲೂರು ಹನುಮಂತಪ್ಪ.—ಹೌದು, ಹೌದು ಅಂಥ ಕೆಲಸಗಳನ್ನು ಆದಷ್ಟು ಛೇಗ execute ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಮತ್ತೆ ಅಂದಾಜಿಲ್ಲ ಅಂತ ಹೇಳಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಇದು Detailed estimates ಅಲ್ಲ. Damaged ವೇಸ್ಟ್ ವೇರ್‌ಗೆ, ಸ್ಲೂಸಿಗೆ 2,400 ರೂಪಾಯಿ ಹಾಕಿ ನೀರು ನಿಲ್ಲಿಸಬೇಕೆಂದು ಹೇಳಿದ್ದೇವೆ. ಹಾಗೆಯೇ quard stageಗಳನ್ನು ಹಾಕುವುದಕ್ಕೆ 2,550 ರೂಪಾಯಿ ತಗಲುವುದಿದೆ,